ದಾಖಲಿಸಿದ್ದು ಅವುಗಳನ್ನು ಶೀಘ್ರ ಇತ್ಯರ್ಥಕ್ಕಾಗಿ ಇಲಾಖೆಯ ಹಿರಿಯ ಅಧಿಕಾರಿಗಳಿಗೆ ವಹಿಸಲಾಗಿದೆ.

1. ಸಹಕಾರ ಸಂಘಗಳ ಜಂಟಿ ನಿಬಂಧಕರು, ನಿಯಮ 441, ಅಮಾನತ್ ಕೋ.ಆಪರೇಟಿವ್ ಬ್ಯಾಂಕ್ ನಿ. ಬೆಂಗಳೂರು ಇವರಿಗೆ 135 ದಾವಾ ಪ್ರಕರಣಗಳನ್ನು ಇತ್ಯರ್ಥಕ್ಕಾಗಿ ವಹಿಸಿಕೊಡಲಾಗಿದ್ದು ಈ ಪೈಕಿ 20 ದಾವೆಗಳಲ್ಲಿ ವಾದಿಗಳೇ ಮತ್ತೊಂದು ದಾವೆಗಳಲ್ಲಿ ಪ್ರತಿವಾದಿಗಳು ಆಗಿರುವುದರಿಂದ ಸಿಂಧುತ್ವ ಇಲ್ಲವೆಂದು ಪರಿಗಣಿಸಿ ವಿಲೇಗೊಳಿಸಿರುತ್ತಾರೆ. ಉಳಿದ 115 ದಾವೆಗಳು ಸದರಿ ನ್ಯಾಯಾಲಯದಲ್ಲಿ ವಿವಿಧ ಹಂತಗಳಲ್ಲಿ ಪ್ರಗತಿಯಲ್ಲಿರುತ್ತವೆ.
2. ತರುವಾಯ ದಾಖಲಾದ 49 ವ್ಯಾಜ್ಯಗಳನ್ನು ಸಮಾಪಕ ಹಾಗೂ ಸಹಕಾರ ಸಂಘಗಳ ಜಂಟಿ ನಿಬಂಧಕರು, ನಿಯಮ 441, ಕಂಟ್ರಾಕ್ಟರ್ಸ್ ಕೋ-ಆಪರೇಟಿವ್ ಬ್ಯಾಂಕ್ ನಿ., ಬೆಂಗಳೂರು ಇವರಿಗೆ ಇತ್ಯರ್ಥಕ್ಕಾಗಿ ವಹಿಸಿಕೊಡಲಾಗಿರುತ್ತದೆ. ಸದರಿ ಪ್ರಕರಣಗಳು ವಿವಿಧ ಹಂತಗಳಲ್ಲಿ ಪ್ರಗತಿಯಲ್ಲಿರುತ್ತವೆ.

ಸಂಖ್ಯೆ: ಸಿಒ 11 ಸಿಹೆಚ್ಎಸ್ 2009

ಸಹಿ/-
(ಲಕ್ಷ್ಮಣ ಸ. ಸವದಿ)
ಸಹಕಾರ ಸಚಿವರು

(ಆರ್.ಎಸ್.ಹುಚ್ಚಾಚಾರಿ)
ವಿಶೇಷ ಕರ್ತವ್ಯಾಧಿಕಾರಿ ಹಾಗೂ
ಪದನಿಮಿತ್ತ ಸರ್ಕಾರದ ಜಂಟಿ ಕಾರ್ಯದರ್ಶಿ,
ಸಹಕಾರ ಇಲಾಖೆ.

ಕರ್ನಾಟಕ ವಿಧಾನ ಸಭೆ

139 ಶ್ರೀ.ಸುರೇಶಗೌಡ,
ಕೃಷಿ ಸಚಿವರು

ಅ) ನಾಗಮಂಗಲ ತಾಲ್ಲೂಕಿನ ಸಣ್ಣ ಹಿಡುವಳಿ ರೈತ ಕುಟುಂಬದವರಿಗೆ ಪ್ರಸಕ್ತ ಸಾಲಿನಲ್ಲಿ ನೀಡಲಾಗುತ್ತಿರುವ ಸಾವಿರ ರೂಪಾಯಿಗಳ ಸಹಾಯ ಧನಕ್ಕೆ ಗುರುತಿಸಲಾಗಿರುವ ರೈತರೆಷ್ಟು;

21030 ಸಣ್ಣ ಮತ್ತು ಅತಿ ಸಣ್ಣ ರೈತ ಕುಟುಂಬಗಳನ್ನು ಗುರುತಿಸಲಾಗಿದೆ.

21030 Small & Marginal Farmers have been identified.

ಆ) ಈವರೆವಿಗೂ ಎಷ್ಟು ರೈತರಿಗೆ ಸಹಾಯ ಧನ ನೀಡಲಾಗಿದೆ;
ಇದುವರೆಗೆ 15,276 ರೈತರಿಗೆ ಸಹಾಯಧನ ನೀಡಲಾಗಿದೆ.

So far 15,276 farmers have been benefited.

ಇ) ಹಾಗಿದ್ದಲ್ಲಿ, ಎಲ್ಲಾ ಅರ್ಹ ರೈತರಿಗೆ ಎಷ್ಟು ದಿವಸದೊಳಗೆ ಸಹಾಯ ಧನ ಒದಗಿಸಲಾಗುವುದು?

2009ರ ಮಾರ್ಚ್ ಅಂತ್ಯದೊಳಗೆ ಎಲ್ಲಾ ಅರ್ಹ ರೈತರಿಗೆ ಸಹಾಯಧನ ಒದಗಿಸಲಾಗುವುದು.

By the end of March 2009 all the eligible farmers will be benefited.

ಕೃತೋಇ/27/ಕೃಯೋಕಾ/2009

ಕೃಷಿ ಸಚಿವರು

ಕರ್ನಾಟಕ ವಿಧಾನ ಸಭೆ

138 ಶ್ರೀ.ಸುರೇಶಗೌಡ (ನಾಗಮಂಗಲ)

ಕೃಷಿ ಮಾರುಕಟ್ಟೆ ಮತ್ತು ಸಕ್ಕರೆ ಸಚಿವರು

ಅ) ಮದ್ದೂರು ತಾಲ್ಲೂಕಿನ ಕೊಪ್ಪ ಗ್ರಾಮದ ಗ್ರಾಮೀಣ ಉಪ ಕೃಷಿ ಮಾರುಕಟ್ಟೆ ಅಭಿವೃದ್ಧಿಗೆ ಅನುದಾನ .ಬಿಡುಗಡೆ ಪ್ರಸ್ತಾವ ಸರ್ಕಾರದ ಗಮನಕ್ಕೆ ಬಂದಿದೆಯೇ;

ಹೌದು.

ಆ) ಹಾಗಿದ್ದಲ್ಲಿ, ಈ ಬಗ್ಗೆ ಸರ್ಕಾರ ಕೈಗೊಂಡ ಕ್ರಮಗಳೇನು?

ಕೊಪ್ಪ ಗ್ರಾಮೀಣ ಮಾರುಕಟ್ಟೆ ಕಾಮಗಾರಿಯ ನಬಾರ್ಡ್ ಆರ್.ಐ.ಡಿ.ಎಫ್ VIIರ ಯೋಜನೆ ಯಡಿಯಲ್ಲಿ 2000–01 ರಲ್ಲಿ ಮಂಜೂರಾಗಿರುತ್ತದೆ. ಈ ಕಾಮಗಾರಿಯ ಯೋಜನಾ ವೆಚ್ಚ ರೂ.6.40 ಲಕ್ಷ ಆಗಿದ್ದು, ಇದರಲ್ಲಿ ನಬಾರ್ಡ್ ಅನುದಾನ ರೂ.5.76 ಲಕ್ಷ ಆಗಿರುತ್ತದೆ. ಕಾಮಗಾರಿಯು ಪೂರ್ಣಗೊಂಡಿದ್ದು ಸರ್ಕಾರದಿಂದ ರೂ.5.76 ಲಕ್ಷ ಮದ್ದೂರು ಸಮಿತಿಗೆ ಬಿಡುಗಡೆ ಮಾಡಲಾಗಿರುತ್ತದೆ.

ಸಂಖ್ಯೆ: ಸಇ 51 ಎಂಆರ್‌ಇ 2009

ಸಹಿ/–

(ಶಿವರಾಜ್ ಎಸ್.ತಂಗಡಗಿ)

ಕೃಷಿ ಮಾರುಕಟ್ಟೆ ಮತ್ತು ಸಕ್ಕರೆ ಸಚಿವರು

(ಸಿ.ಕೆ.ವಾಸುದೇವ ಮೂರ್ತಿ)

ಸರ್ಕಾರದ ಅಧೀನ ಕಾರ್ಯದರ್ಶಿ

ಸಹಕಾರ ಇಲಾಖೆ